# ನಗರಸಭಾ ಕಾರ್ಯಾಲಯ, ರಾಮನಗರ

visit us at http://www.ramanagaracity.gov.in

ನಸರಾ/ಕಾವಿ/ಸ.ಅ/ಟೆಂಡರ್/U.G/ /2007-08 ದಿ: 07.07.2007

## ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಮತ್ತು ನಗರಸಭೆಯಲ್ಲಿ 2007-08 ನೇ ಸಾಲಿನಲ್ಲಿ ನೋಂದಣಿ ಮಾಡಿಕೊಂಡ ಗುತ್ತಿಗೆದಾರರಿಂದ 12 ನೇ ಹಣಕಾಸು (2006-07) ಅನುದಾನದಡಿಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಶೇಕಡವಾರು ಟೆಂಡರ್‌ಗಳನ್ನು ದ್ವಿಪ್ರತಿಯಲ್ಲಿ ನಿಗಧಿತ ನಮೂನೆಯಲ್ಲಿ ಪೌರಾಯುಕ್ತರು ನಗರಸಭೆ, ರಾಮನಗರ ಇವರಿಂದ ಕರೆಯಲಾಗಿದೆ.

1. ಗುತ್ತಿಗೆದಾರರು ಸಂಬಂಧಿಸಿದ ಗುತ್ತಿಗೆ ನೋಂದಣಿ ಪ್ರತಿಯೊಂದಿಗೆ ಟೆಂಡರ್ ಫಾರಂಗಾಗಿ ಕೋರಿಕೆಯನ್ನು ದಿನಾಂಕ: 21-07-2007 ಸಾಯಂಕಾಲ 4.00 ಘಂಟೆಯೊಳಗಾಗಿ ಫಾರಂ ಶುಲ್ಕ ರೂ. 500/- + ತೆರಿಗೆ ಪಾವತಿಯೊಂದಿಗೆ ಟೆಂಡರ್ ಫಾರಂ ಕೋರಿಕೆಯನ್ನು ಸಲ್ಲಿಸಬಹುದಾಗಿದೆ.

2. ಖಾಲಿ ಟೆಂಡರ್ ಫಾರಂಗಳನ್ನು ದಿ: 28-07-2007 ಸಾಯಂಕಾಲ 5.00 ಘಂಟೆವರೆಗೆ ವಿತರಿಸಲಾಗುವುದು.

3. ಭರ್ತಿ ಮಾಡಿದ ಮೂಲ ಮತ್ತು ನಕಲು ಟೆಂಡರ್ ಫಾರಂಗಳನ್ನು ದಿ: 08-08-2007 ಸಾಯಂಕಾಲ 4.30 ಘಂಟೆಯೊಳಗಾಗಿ ಸ್ವೀಕರಿಸಲಾಗುವುದು ಹಾಗೂ ಟೆಂಡರ್‌ಗಳನ್ನು ಸಾಧ್ಯವಾದರೆ ಅದೇ ದಿನ ಅಥವಾ ಮುಂದಿನ ದಿನಗಳಲ್ಲಿ ಹಾಜರಿರುವ ಗುತ್ತಿಗೆದಾರರ ಸಮಕ್ಷಮದಲ್ಲಿ ತೆರೆಯಲಾಗುವುದು.

4. ಇ.ಎಂ.ಡಿ. ಹಣವನ್ನು ನಗದಾಗಿ ಈ ನಗರಸಭೆಯಲ್ಲಿ ಪಾವತಿಸಿದ ರಶೀದಿ ಅಥವಾ ಪೌರಾಯುಕ್ತರ ಹೆಸರಿನಲ್ಲಿ ಡಿ.ಡಿ. ಖರೀದಿಸಿ ಲಗತ್ತಿಸುವುದು ಪ್ರತಿ ಕಾಮಗಾರಿಗೆ ಪ್ರತ್ಯೇಕವಾಗಿ ಇ.ಎಂ.ಡಿ ಹಣವನ್ನು ಸಲ್ಲಿಸತಕ್ಕದ್ದು ಇಲ್ಲವಾದ್ದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

5. ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಕಾಮಗಾರಿಗಳಿಗೆ ಸಂಬಂಧಿಸಿದ ಸ್ಥಳಗಳನ್ನು ಮತ್ತು ಅಂದಾಜು ಪತ್ರಗಳನ್ನು ಪೂರ್ವಭಾವಿಯಾಗಿ ಪರಿಶೀಲಿಸಿಕೊಂಡು ಟೆಂಡರ್ ದರಪಟ್ಟಿ ಸಲ್ಲಿಸತಕ್ಕದ್ದು. ಆನಂತರ ತಕರಾರಿಗೆ ಅವಕಾಶವಿರುವುದಿಲ್ಲ. ಟೆಂಡರ್‌ದಾರರು ಪಿ.ಡಬ್ಲ್ಯೂ.ಡಿ ಕೋಡ್ 65 ರಲ್ಲಿ ನಮೂದಾಗಿರುವ ಎಲ್ಲಾ ಷರತ್ತುಗಳಿಗೂ ಬದ್ದರಾಗಿರತಕ್ಕದ್ದು.

6. ಟೆಂಡರ್‌ದಾರರು ಟೆಂಡರ್ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು.

7. ಟೆಂಡರ್‌ದಾರರು ಟೆಂಡರ್ ಲಕೋಟೆಯ ಮೇಲೆ ಟೆಂಡರ್ ಕ್ರ.ಸಂ. ಮತ್ತು ಕಾಮಗಾರಿ ಹೆಸರನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು ಹಾಗೂ ಗುತ್ತಿಗೆದಾರರು ತಮ್ಮ ಪೂರ್ಣ ಅಂಚೆ ವಿಳಾಸವನ್ನು ಟೆಂಡರ್ ಲಕೋಟೆ ಮತ್ತು ಟೆಂಡರ್ ದರ ಪಟ್ಟಿಯಲ್ಲಿ ತಪ್ಪದೇ ಬರೆಯತಕ್ಕದ್ದು.

8. ಟೆಂಡರ್ ಮಂಜೂರಾತಿ ಪಡೆದ ಗುತ್ತಿಗೆದಾರರು ನಗರಸಭೆಯ ಪೌರಾಯುಕ್ತರು, ಅಭಿಯಂತರರು ನೀಡುವ ಸಲಹೆ ಮತ್ತು ತಾಂತ್ರಿಕ ನಿಯಮದಂತೆ ಕಾಮಗಾರಿ ನಿರ್ವಹಿಸಲು ಬದ್ದರಾಗಿರತಕ್ಕದ್ದು.

9. ಕಾಮಗಾರಿ ನಿರ್ವಹಣೆಗೆ ಪಾವತಿಸಲಾಗುವ ಬಿಲ್ಲು ಮೊಬಲಗಿನ ನಂತರ ಬರಬಹುದಾದ ಯಾವುದೇ ಆಡಿಟ್ ಆಕ್ಷೇಪಣೆಗೆ ಗುತ್ತಿಗೆದಾರರನ್ನೇ ನೇರವಾಗಿ ಹೊಣೆಗಾರರನ್ನಾಗಿ ಗುರಿಪಡಿಸಲಾಗುತ್ತದೆ ಇದಕ್ಕೆ ಬದ್ದರಾಗಿರತಕ್ಕದ್ದು.

10. ಮಂಜೂರಾತಿ ಪಡೆದ ಗುತ್ತಿಗೆದಾರರು ನಿಗಧಿಪಡಿಸಿದ ಕಾಲಾವಧಿಯಲ್ಲಿ ಕಾಮಗಾರಿಯನ್ನು ನಿರ್ವಹಿಸದಿದ್ದಲ್ಲಿ ಅಂತಹ ಗುತ್ತಿಗೆದಾರರ ಬಗ್ಗೆ ಪಿ.ಡಬ್ಲ್ಯೂ.ಡಿ-65ರಲ್ಲಿ ನಮೂದಿಸಿರುವಂತೆ ಕ್ರಮ ಕೈಗೊಳ್ಳಬೇಕಾಗುತ್ತದೆ. ಕಾಮಗಾರಿಯು ಭೌತಿಕವಾಗಿ ಪೂರ್ಣಗೊಂಡ ನಂತರ ಸ್ಥಳದಲ್ಲಿ ಉಳಿಯಬಹುದಾದ ಅನುಪಯುಕ್ತ ಸಾಮಾಗ್ರಿಗಳನ್ನು ಅಭಿಯಂತರರ ಸೂಚನೆಯಂತೆ ತೆಗೆದುಹಾಕಿಸಿ ಸ್ವಚ್ಛಗೊಳಿಸಲು ಗುತ್ತಿಗೆದಾರರು ಬದ್ದರಾಗಿರತಕ್ಕದ್ದು.

11. ಟೆಂಡರ್ ಮಂಜೂರಾತಿಯು ನಗರಸಭೆ ಕಾಯ್ದೆ ಹಾಗು ನಿಯಾಮಾವಳಿಯಂತೆ ಕಾಯ್ದಿರಿಸಲಾಗಿದೆ.

12. ಟೆಂಡರ್ ಮಂಜೂರಾತಿಯಾದ ಗುತ್ತಿಗೆದಾರರು ಛಾಪಾ ಕಾಗದದ ಮೂಲಕ ಮುಚ್ಚಳಿಕೆ ಸಲ್ಲಿಸಿ ಒಂದು ವಾರದಲ್ಲಿ ಸಂಬಂಧಿಸಿದ ಅಭಿಯಂತರರುಗಳಿಂದ ಕಾಮಗಾರಿ ನಿರ್ವಹಣ ಸ್ಥಳವನ್ನು ಗುರ್ತು ಮಾಡಿಸಿಕೊಂಡು ಕಾಮಗಾರಿ ಪ್ರಾರಂಭಿಸತಕ್ಕದ್ದು ತಪ್ಪಿದಲ್ಲಿ ಠೇವಣಿ ಹಣವನ್ನು ನಗರಸಭೆಗೆ ಅಮಾನತ್ತುಗೊಳಿಸಿ ಈ ಕಾಮಗಾರಿ ನಿರ್ವಹಣೆಯಿಂದ ಉಂಟಾಗಬಹುದಾದ ನಷ್ಟ ಮತ್ತು ತುಷ್ಠಿಗಳಿಗೆ ಟೆಂಡರ್‌ದಾರರೇ ನೇರ ಹೊಣೆಗಾರರಾಗಿರುತ್ತಾರೆ. ಅಂತಹ ಗುತ್ತಿಗೆದಾರರುಗಳ ವಿರುದ್ಧ ಅಗತ್ಯ ಶಿಸ್ತಿನ ಕ್ರಮಕೈಗೊಳ್ಳಲಾಗುವ ಅಧಿಕಾರವನ್ನು ನಗರಸಭೆಯು ಕಾಯ್ದಿರಿಸಿಕೊಳ್ಳಲಾಗಿದೆ.

13. ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ಯಾವುದೇ ಕಾರಣ ನೀಡದೆ ತಿರಸ್ಕರಿಸುವ, ಹಿಂತೆಗೆದುಕೊಳ್ಳುವ ಅಥವಾ ರದ್ದು ಪಡಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವ ಅಧಿಕಾರಿಗಳು ಕಾಯ್ದಿರಿಸಿಕೊಂಡಿರುತ್ತಾರೆ.

PDF Created with deskPDF PDF Writer - Trial :: http://www.docudesk.com

14. ಪೂರ್ಣಗೊಂಡ ಕಾಮಗಾರಿಯ ಅಂತಿಮ ಬಿಲ್ ಪಾವತಿಸಿದ ದಿನಾಂಕದಿಂದ ಮುಂದುವರೆದಂತೆ ಕಾಮಗಾರಿಯ ನಿರ್ವಹಣೆಯನ್ನು 2 ವರ್ಷದ ಅವಧಿಯವರೆಗೆ ಗುತ್ತಿಗೆದಾರರೇ ಯಾವುದೇ ವೆಚ್ಚ ನಿರೀಕ್ಷಿಸದೆ ನಿರ್ವಹಿಸತಕ್ಕದ್ದು

15. ಬಿಲ್ಲುಗಳಲ್ಲಿ ಸರ್ಕಾರ ಸೂಚಿಸಿರುವ ತೆರಿಗೆಗಳನ್ನು ಕಟಾಯಿಸಲಾಗುವುದು.

16. ಟೆಂಡರ್ ನಿಗಧಿತ ಷೆಡ್ಯೂಲ್ ದರಗಳಿಗಿಂತ ಕಡಮೆ ದರ ನಮೂದಿಸುವ ಗುತ್ತಿಗೆದಾರರು ಅಂತಹ ವ್ಯತ್ಯಾಸದ ಮೊತ್ತವನ್ನು ಡಿ.ಡಿ. ಮೂಲಕ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು ಮತ್ತು ನಿಗಧಿತ ವ್ಯತ್ಯಾಸದ ಮೊತ್ತಕ್ಕಿಂತ ಕಡಿಮೆ ಡಿ.ಡಿ. ಇದ್ದ ಪಕ್ಷದಲ್ಲಿ ಟೆಂಡರ್ ತಿರಸ್ಕರಿಸಲಾಗುವುದು.

17. ಕೆಲಸ ಪೂರ್ಣಗೊಂಡ ನಂತರ ಕಾಮಗಾರಿಯ ಗುಣಮಟ್ಟದ ಬಗ್ಗೆ ಮೂರನೇ ವ್ಯಕ್ತಿಯಿಂದ (Thirty Party Inspection) ಪರಿಶೀಲಿಸಿದ ನಂತರ ಬಿಲ್‌ನ್ನು ಪಾವತಿಸಲಾಗುವುದು.

18. ಸರ್ಕಾರದ ಆದೇಶದಂತೆ ಕಟ್ಟಡ ಕಾರ್ಮಿಕರ ಕಲ್ಯಾಣ ನಿಧಿಗಾಗಿ ಬಿಲ್ ಮೊಬಲಗಿನ ಶೇ. 1 ರಷ್ಟು ಹಣವನ್ನು ಕಟಾಯಿಸಲಾಗುವುದು.

19. ಗುತ್ತಿಗೆದಾರರೇ ತಮ್ಮ ಸ್ವಂತ ಖರ್ಚಿನಿಂದ ಕಾಮಗಾರಿಗೆ ಉಪಯೋಗಿಸುವ ಸಾಮಾಗ್ರಿಗಳ ಗುಣಮಟ್ಟದ ಬಗ್ಗೆ ಪರಿಶೀಲನಾ ವರದಿಯನ್ನು ಸಲ್ಲಿಸಲು ಬದ್ಧರಾಗಿರತಕ್ಕದ್ದು.

21. ಸರ್ಕಾರದ ಆದೇಶ ಸಂಖ್ಯೆ ಎಲ್.ಡಿ/300/ಎಲ್.ಇ.ಟಿ/2006, ದಿ: 28.2.007 (ತಿದ್ದು ಪಡಿ)ರಂತೆ ಕಟ್ಟಡ ಮತ್ತು ಇತರೆ ನಿರ್ಮಾಣದ ಕಾರ್ಮಿಕರ ಕಲ್ಯಾಣ ನಿಧಿಗಾಗಿ ಕರ (ಸೆಸ್) ಶೇ. 1 ರಷ್ಟನ್ನು ಟೆಂಡರ್ ಸಲ್ಲಿಸುವ ಗುತ್ತಿಗೆದಾರರು ಟೆಂಡರ್‌ನಲ್ಲಿ ನಮೂದಿಸುವ ದರಕ್ಕೆ ಸೇರಿಸತಕ್ಕದ್ದು. ಬಿಲ್ ಪಾವತಿ ವೇಳೆಯಲ್ಲಿ ಶೇ. 1 ರಷ್ಟು ಮೊಬಲಗನ್ನು ಕಟಾಯಿಸಲಾಗುವುದು.

22. ಹೆಚ್ಚಿನ ವಿವರಗಳನ್ನು ಹಾಗು ಕಾಮಗಾರಿಗಳ ವಿವರಗಳನ್ನು ಕಛೇರಿ ವೇಳೆಯಲ್ಲಿ ಬಂದು ಪಡೆಯಬಹುದಾಗಿದೆ.

| ಕ. ಸಂ | ಕಾಮಗಾರಿ ವಿವರ | ಅಂದಾಜು ಮೊತ್ತ (ಲಕ್ಷ ರೂ. ಗಳಲ್ಲಿ) | ಇ.ಎಂ.ಡಿ ಮೊತ್ತ | ಕೆಲಸ ಪೂರ್ಣಗೊಳಿಸುವ ಅವಧಿ | ಗುತ್ತಿಗೆದಾರರ ದರ್ಜೆ |
|---|---|---|---|---|---|
| 1 | ಅಂಬೇಡ್ಕರ್ ಭವನದ ಶೌಚಾಲಯ ದುರಸ್ಥಿ | 0.25 | 625 | 60 ದಿನಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು |
| 2 | ನಗರಸಭಾ ಕಛೇರಿಯ ದುರಸ್ಥಿ ಮಾಡುವುದು. | 0.50 | 1250 | 60 ದಿನಗಳು | 3 ನೇ ದರ್ಜೆ ಮತ್ತು ಮೇಲ್ಪಟ್ಟು |

ಪೌರಾಯುಕ್ತರು
ನಗರಸಭೆ, ರಾಮನಗರ

PDF Created with deskPDF PDF Writer - Trial :: http://www.docudesk.com